# ಕರ್ನಾಟಕ ವಿಧಾನ ಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 243 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 06.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಪ್ರಕೃತಿ ವಿಕೋಪ ಹಾಗೂ ಇತರ ದುರ್ಘಟನೆಗಳ ಕುರಿತಂತೆ ವಾರ್ಷಿಕವಾಗಿ ಪೋಲೀಸ್ ಇಲಾಖೆಯಲ್ಲಿ ದಾಖಲಾಗುವ ಪ್ರಥಮ ಮಾಹಿತಿ ವರದಿಗಳ ಸಂಖ್ಯೆಯೆಷ್ಟು; ಈ ಕುರಿತಂತೆ ಜಿಲ್ಲಾವಾರು ಪ್ರಥಮ ಮಾಹಿತಿ ವಿಧವಾರು (Type of FIR) ವರದಿಗಳು ಲಭ್ಯವಿದೆಯೇ; ಇದ್ದಲ್ಲಿ ಕ್ರೂಢೀಕೃತ ವರದಿಯನ್ನು ನೀಡುವುದು;</td><td>ಕರ್ನಾಟಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಪ್ರಕೃತಿ ವಿಕೋಪ ಹಾಗೂ ಇತರೆ ದುರ್ಘಟನೆಗಳ ಕುರಿತಂತೆ ದಾಖಲಾದ ಪ್ರಥಮ ವರ್ತಮಾನ ವರದಿಗಳ ಸಂಖ್ಯಾವಾರು ಮಾಹಿತಿಯನ್ನು ಅನುಬಂಧ-ಅ ದಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಪೋಲೀಸ್ ಇಲಾಖೆಯಲ್ಲಿ ದಾಖಲಾಗುವ ಪ್ರಥಮ ಮಾಹಿತಿ ವರದಿಗಳ ಆಧಾರದಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗುವ ವಿಷಯ ಮತ್ತು ಕಾರಣಗಳಿಗೆ ಸಂಬಂಧಿಸಿದಂತೆ ಆಯಾಯ ಇಲಾಖೆಗಳಿಗೆ ಸೂಕ್ತ ಪರಿಹಾರ ಕ್ರಮ ಮತ್ತು ಪ್ರಕರಣಗಳ ಸಂಖ್ಯೆಗಳನ್ನು ನಿಯಂತ್ರಿಸುವ ಕ್ರಮವಹಿಸುವ ಬಗ್ಗೆ ಅಗತ್ಯ ಮಾಹಿತಿಯನ್ನು ಮುಖ್ಯ ಕಾರ್ಯದರ್ಶಿಗಳ ಹಾಗೂ ಜಿಲ್ಲಾಧಿಕಾರಿಗಳ ಮೂಲಕ ನೀಡಲಾಗುತ್ತಿದೆಯೇ;</td><td>ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ(ದಿನಾಂಕ: 19.03.2025ರ ಸರ್ಕಾರದ ಪತ್ರದ ಪ್ರತಿ ಲಗತ್ತಿಸಿದೆ).</td></tr>
<tr><td>ಇ)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಒಟ್ಟು ಪ್ರಥಮ ಮಾಹಿತಿ ವರದಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಪ್ರಥಮ ಮಾಹಿತಿ ವರದಿಗಳ ಸಂಖ್ಯಾವಾರು ಮಾಹಿತಿ ಕೆಳಗಿನಂತಿದೆ:-
<table>
<tr><th>ವರ್ಷ</th><th>ದಕ್ಷಿಣ ಕನ್ನಡಯಲ್ಲಿ ದಾಖಲಾದ ಪ್ರಥಮ ವರದಿಗಳ ಸಂಖ್ಯೆ</th><th>ಉಡುಪಿಯಲ್ಲಿ ದಾಖಲಾದ ಪ್ರಥಮ ವರದಿಗಳ ಸಂಖ್ಯೆ</th></tr>
<tr><td>2023</td><td>3032</td><td>3323</td></tr>
<tr><td>2024</td><td>2952</td><td>3351</td></tr>
<tr><td>2025</td><td>435</td><td>538</td></tr>
<tr><td>ಒಟ್ಟು</td><td>6419</td><td>7212</td></tr>
</table></td></tr>
</table>

<table>
<tr>
<td>ಈ)</td>
<td>ಅವುಗಳಲ್ಲಿ ಈವರೆಗೆ ವರದಿಯಾದ ಪ್ರಕೃತಿ ವಿಕೋಪಗಳಾದ ನೆರೆ, ಮನೆ ಕುಸಿತ, ಮರಗಳು ಬಿದ್ದು ಮಾರಣಾಂತಿಕ ಮತ್ತು ಸ್ವತ್ತು ಹಾನಿ, ಸಿಡಿಲು ಅಪಘಾತ ಇತ್ಯಾದಿಗಳಿಗೆ ಸಂಬಂಧಿಸಿದ ಪ್ರಕರಣಗಳು ಎಷ್ಟು?</td>
<td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರಕೃತಿ ವಿಕೋಪಗಳಾದ ನೆರೆ, ಮನೆ ಕುಸಿತ, ಮರಗಳು ಬಿದ್ದು ಮಾರಣಾಂತಿಕ ಮತ್ತು ಸ್ವತ್ತು ಹಾನಿ, ಸಿಡಿಲು ಅಪಘಾತ ಇತ್ಯಾದಿಗಳ ಕುರಿತು ದಾಖಲಾದ ಪ್ರಕರಣಗಳ ಸಂಖ್ಯಾವಾರು ವಿವರ ಕೆಳಗಿನಂತಿದೆ:-
<table>
<tr><th rowspan="2">ಘಟಕ</th><th rowspan="2">ವಿಷಯ</th><th colspan="3">ವರ್ಷ</th><th rowspan="2">ಒಟ್ಟು</th></tr>
<tr><th>2023</th><th>2024</th><th>2025</th></tr>
<tr><td rowspan="5">ದಕ್ಷಿಣ ಕನ್ನಡ ಜಿಲ್ಲೆ</td><td>ನೆರೆ</td><td>0</td><td>0</td><td>0</td><td>0</td></tr>
<tr><td>ಮನೆ ಕುಸಿತ</td><td>1</td><td>0</td><td>0</td><td>2</td></tr>
<tr><td>ಮರಗಳು ಬಿದ್ದು ಮಾರಣಾಂತಿಕ</td><td>1</td><td>2</td><td>0</td><td>3</td></tr>
<tr><td>ಸ್ವತ್ತು ಹಾನಿ</td><td>0</td><td>0</td><td>0</td><td>0</td></tr>
<tr><td>ಸಿಡಿಲು ಅಪಘಾತ</td><td>0</td><td>5</td><td>0</td><td>5</td></tr>
<tr><td colspan="6"></td></tr>
<tr><td rowspan="5">ಉಡುಪಿ ಜಿಲ್ಲೆ</td><td>ನೆರೆ</td><td>4</td><td>2</td><td>0</td><td>6</td></tr>
<tr><td>ಮನೆ ಕುಸಿತ</td><td>0</td><td>1</td><td>0</td><td>1</td></tr>
<tr><td>ಮರಗಳು ಬಿದ್ದು ಮಾರಣಾಂತಿಕ</td><td>3</td><td>1</td><td>1</td><td>5</td></tr>
<tr><td>ಸ್ವತ್ತು ಹಾನಿ</td><td>0</td><td>0</td><td>0</td><td>0</td></tr>
<tr><td>ಸಿಡಿಲು ಅಪಘಾತ</td><td>2</td><td>2</td><td>0</td><td>4</td></tr>
</table>
</td>
</tr>
<tr>
<td>ಊ)</td>
<td>ಈ ಕುರಿತು ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳ ನಿಯಂತ್ರಣಕ್ಕಾಗಿ ಆಯಾಯ ಇಲಾಖೆಗಳಿಗೆ ಸೂಕ್ತ ಪರಿಹಾರ ಕ್ರಮ ರೂಪಿಸುವ ಬಗ್ಗೆ ಏನು ನಿರ್ದೇಶನ ನೀಡಲಾಗಿದೆ: ಏನು ಕ್ರಮ ವಹಿಸಲಾಗಿದೆ? (ವಿವರ ನೀಡುವುದು)</td>
<td>ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ(ದಿನಾಂಕ: 19.03.2025ರ ಸರ್ಕಾರದ ಪತ್ರದ ಪ್ರತಿ ಲಗತ್ತಿಸಿದೆ).</td>
</tr>
</table>

ಸಂಖ್ಯೆ: 96 ಎಸ್‌ಎಸ್‌ಟಿ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

9734199

**ಕರ್ನಾಟಕ ಸರ್ಕಾರ**

ಸಂಖ್ಯೆ: ಹೆಚ್‌ಡಿ 96 ಎಸ್.ಎಸ್.ಟಿ 2025

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 19.03.2025

**ಇವರಿಂದ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಒಳಾಡಳಿತ ಇಲಾಖೆ,
ವಿಧಾನ ಸೌಧ, ಬೆಂಗಳೂರು.

**ಇವರಿಗೆ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001.

ಮಾನ್ಯರೇ,

**ವಿಷಯ:** ಶ್ರೀ ಮಂಜುನಾಥ್ ಭಂಡಾರಿ, ಮಾನ್ಯ ವಿಧಾನ ಪರಿಷತ್ತು ಸದಸ್ಯರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 243ರ ಉಪ ಪ್ರಶ್ನೆ (ಆ) ಮತ್ತು (ಊ) ಗೆ ಉತ್ತರ ಒದಗಿಸುವ ಬಗ್ಗೆ.

**ಉಲ್ಲೇಖ:** 1 ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಇವರ ಪತ್ರ ಸಂಖ್ಯೆ: ಎಲ್‌ಸಿಕ್ಯೂ:243:155ನೇಅ:2025, ದಿನಾಂಕ: 27.02.2025.

2 ಸರ್ಕಾರದ ಸಮ ಸಂಖ್ಯೆಯ ಅನಧಿಕೃತ ಟಿಪ್ಪಣಿ ದಿನಾಂಕ: 05.03.2025.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(2)ರ ಅನಧಿಕೃತ ಟಿಪ್ಪಣಿಯಲ್ಲಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 243ರ ಉಪ ಪ್ರಶ್ನೆ (ಆ) ಮತ್ತು (ಊ) ಗೆ ಉತ್ತರ ಒದಗಿಸುವಂತೆ ಕೋರಲಾಗಿತ್ತು. ಆದರೆ, ಸದರಿ ಉಪ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿರುವುದಿಲ್ಲ.

ಆದ್ದರಿಂದ, ಈ ಪತ್ರದೊಂದಿಗೆ ಲಗತ್ತಿಸಿರುವ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 243ರ ಉಪ ಪ್ರಶ್ನೆ (ಆ) ಮತ್ತು (ಊ) ಗಳಿಗೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಯಲ್ಲಿ ದಾಖಲಾಗುವ ಪ್ರಥಮ ವರದಿ ಆಧಾರದಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗುವ ವಿಷಯ ಮತ್ತು ಕಾರಣಗಳಿಗೆ ಸಂಬಂಧಿಸಿದಂತೆ ಸೂಕ್ತ ಪರಿಹಾರ ಕ್ರಮ ಮತ್ತು ಪ್ರಕರಣಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಆಯಾಯ ಇಲಾಖೆಗಳಿಗೆ ಸೂಕ್ತ ಪರಿಹಾರ ಕ್ರಮ ರೂಪಿಸಲು ಸೂಕ್ತ ನಿರ್ದೇಶನ ನೀಡುವಂತೆ ಹಾಗೂ ಮಾಹಿತಿಯನ್ನು ಒಳಾಡಳಿತ ಇಲಾಖೆಗೆ ಒದಗಿಸುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ನಾಗರಾಜು ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ)
ದೂರವಾಣಿ: 080 22033254
ಇ-ಮೇಲ್: uslo-home@karnataka.gov.in

**ಪ್ರತಿಯನ್ನು:**

ಮಹಾ ನಿರ್ದೇಶಕರು ಹಾಗೂ ಆರಕ್ಷಕ ಮಹಾನಿರೀಕ್ಷಕರು, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಪ್ರಕೃತಿ ವಿಕೋಪ ಹಾಗೂ ಇತರ ದುರ್ಘಟನೆಗಳ ಕುರಿತಂತೆ ದಾಖಲಾಗುವ ಪ್ರಥಮ ಮಾಹಿತಿಯ ವರದಿಯನ್ನು ಕಾಲಕಾಲಕ್ಕೆ ತಕ್ಷಣವೇ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ನೀಡಲು ಸಂಬಂಧಿಸಿದವರಿಗೆ ಸೂಚನೆ ನೀಡಲು ಕೋರಿದೆ.